# ಭೀಮನ ಗುಡ್ಡ ಏರೋಣ ಹಸಿರ ಸಿರಿಯ ಸವಿಯೋಣ...

■ ಶ್ರೀನಿವಾಸ ಮೂರ್ತಿ ಎನ್.ಎಸ್.

ಪ್ರತಿ ಬಾರಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಗೆ ಹೋದಾಗಲೂ ಉಂಚಳ್ಳಿ ಜಲಪಾತದ ಸನಿಹದ ಭೀಮನ ಗುಡ್ಡ ಕೈಬೀಸಿ ಕರೆದಂತಾಗುತ್ತಿತ್ತು.

ಅಘನಾಶಿನಿ ಕಣಿವೆಯಲ್ಲಿರುವ ಭೀಮನ ಗುಡ್ಡಕ್ಕೆ ಸಂಜೆ ಸೂರ್ಯನ ಕಿರಣಗಳು ತಾಗುವ ನೋಟವನ್ನು ಸೆರೆಹಿಡಿಯಲು ಶಿರಸಿಯಿಂದ ಹೊರಟಾಗ ಸಂಜೆ ನಾಲ್ಕರ ಸಮಯ. ಶಿರಸಿಯಿಂದ ಸುಮಾರು 30 ಕಿ.ಮೀ. ದೂರದಲ್ಲಿ ಮತ್ತು ಅಮ್ಮಿನ ಹಳ್ಳಿಯಿಂದ 13 ಕಿ.ಮೀ. ದೂರದಲ್ಲಿ ಉಂಚಳ್ಳಿ ಜಲಪಾತಕ್ಕೆ ಹೋಗುವ ದಾರಿಯಲ್ಲಿ ಸಾಗಬೇಕು.

ನಿಲ್ಕುಂದ ಹಳ್ಳಿಯ ನಂತರ ಬಲಕ್ಕೆ ತಿರುಗಿ ಹೋಗಬೇಕು. ದಟ್ಟ ಅರಣ್ಯ ಮತ್ತು ಜನ ವಿರಳತೆ, ಸಂಚಾರಿ ದೂರವಾಣಿಯ ಸಂಪರ್ಕ ಕೊರತೆ ಕಾರಣ ಫಲಕ ತಪ್ಪಿಸಿಕೊಳ್ಳುವ ಹಾಗಿಲ್ಲ. ಇಲ್ಲಿಂದ ಮುಂದೆ ಹೋದಲ್ಲಿ ಅರಣ್ಯ ತಪಾಸಣೆ ಕೇಂದ್ರ ಸಿಗುತ್ತದೆ. ಇಲ್ಲಿ ಪ್ರವೇಶ ಚೀಟಿ ಪಡೆದು ಮೊದಲ ವ್ಯೂ ಪಾಯಿಂಟ್‌ವರೆಗೂ ವಾಹನದಲ್ಲಿ ಸಾಗಬಹುದು.

ಇಲ್ಲಿಂದ ಬೆಟ್ಟದ ತುದಿಗೆ ಹೋಗಲು ಚಾರಣದ ಹಾದಿ ಆರಂಭ. ಇಲ್ಲಿ ಕಾಡುವ ನೀರವ ಮೌನದಲ್ಲಿ ನಮ್ಮ ಚಾರಣದ ಹಾದಿ ಸಾಗಿತು. ಜನ ವಿರಳತೆಯ ಒಂಟಿ ಪ್ರಯಾಣ ಸೂಕ್ತ ಅಲ್ಲ. ನಮ್ಮ ಪಯಣದಲ್ಲಿ ಮಧ್ಯ ಮಧ್ಯ ಸಿಕ್ಕ ಶಬ್ದಗಳನ್ನು ಆಸ್ವಾದಿಸುತ್ತಾ ಅಘನಾಶಿನಿ ಕಣಿವೆಯ ಮೋಹಕ ದೃಶ್ಯವನ್ನು ಕಣ್ತುಂಬಿಕೊಂಡೆವು.

ತುದಿಯಲ್ಲಿ ನಿಂತು ಸುತ್ತಲೂ ಕಾಣುವ ಹಸಿರನ್ನ ಹೊತ್ತ ಬೆಟ್ಟಗಳ ಛಾಯಾಚಿತ್ರ ತೆಗೆಯಲು ಸಂಜೆ ಸುಸುಮಯ. ಕಣಿವೆಯಲ್ಲಿ ಸಾಗುವ ಅಘನಾಶಿನಿಯ ನಡುವೆ ರವಿ ಕಿರಣಗಳು ಮೂಡಿಸುವ ಸುಂದರ ಚಿತ್ರಗಳು ಮನದಲ್ಲಿನ ಜಂಜಾಟಗಳು ಕಳೆದುಹೋಗುವಂತೆ ಮಾಡುತ್ತವೆ. ಸೂರ್ಯಾಸ್ತದ ನೋಟ ವಿಹಂಗಮ. ಆದರೆ ಎಚ್ಚರವಿರಲಿ. ಸುತ್ತಲೂ ನೋಡಲು ಮಂಟಪವಿದ್ದರೂ ದಟ್ಟ ಕಣಿವೆಯಲ್ಲಿ ಎಚ್ಚರಿಕೆ ಅನಿವಾರ್ಯ.

ಸೂರ್ಯಾಸ್ತದ ನಂತರ ಇಲ್ಲಿರುವುದು ಸೂಕ್ತ ಅಲ್ಲ. ಇಲ್ಲಿನ ಅರಣ್ಯ ಸಿಬ್ಬಂದಿಯೂ ಇದ್ದ ಕಾರಣ ತುಸು ಧೈರ್ಯದಿಂದ ಸಾಗಿದೆವು. ಕುಟುಂಬದೊಂದಿಗೆ ಪಯಣ ಮಾಡುವಾಗ ಜಾಗ್ರತೆ ಇರುವುದು ಒಳಿತು. ಸ್ಥಳೀಯವಾಗಿ ಮಹಾಭಾರತದಲ್ಲಿ ಇಲ್ಲಿ ಭೀಮ ವಿಶ್ರಾಂತಿ ಪಡೆದ ಕಾರಣ ಈ ಗುಡ್ಡಕ್ಕೆ ಭೀಮನ ಗುಡ್ಡ ಎಂಬ ಹೆಸರು ಬಂದಿತು ಎನ್ನಲಾಗಿದೆ.

ಭೀಮನ ಗುಡ್ಡಕ್ಕೆ ಸಮೀಪದಲ್ಲಿ ಉಂಚಳ್ಳಿ ಜಲಪಾತ, ವಾಟೆಹೊಳೆ ಜಲಪಾತ ಮತ್ತು ಭೀಮನ ಗುಡ್ಡದಷ್ಟೇ ಸುಂದರವಾದ ನಿಶಾನೆ ಗುಡ್ಡ ನೋಡಲು ಮರೆಯಬೇಡಿ. ಸಮಯವಿದ್ದಲ್ಲಿ ಮುಂಜಾನೆ ಯಾಣ, ಬೆಣ್ಣೆಹೊಳೆ ಜಲಪಾತ, ಮಂಜುಗುಣಿಯ ಪ್ರಸಿದ್ಧ ವೆಂಕಟೇಶ್ವರ ದೇವಾಲಯವನ್ನು ನೋಡಿ ಇಲ್ಲಿಗೆ ಬರಬಹುದು.

ಎಲ್ಲಾ ಸಮಯದಲ್ಲಿಯೂ ಇಲ್ಲಿ ಬರಬಹುದಾದರೂ ಮಳೆಗಾಲದಲ್ಲಿ ಕಾಡುವ ಮಳೆ ಪ್ರಕೃತಿಯಲ್ಲಿ ಸಿಗುವ ಅನುಭೂತಿಯನ್ನು ಅನುಭವಿಸಲು ತೊಡಕುಂಟು ಮಾಡುತ್ತದೆ. ■




